# ಗೀತೆಯಲ್ಲಿ ಏನಿದೆ ?

ಸ್ವಾಮಿ ಹರ್ಷಾನಂದ

> ಇದೇ ಡಿಸೆಂಬರ್ ೨೬ ರಂದು ಗೀತಾ ಜಯಂತಿ ಎಲ್ಲೆಡೆಯೂ ಆಚರಿಸಲ್ಪಡುತ್ತದೆ. ಎಲ್ಲ ಕಾಲಕ್ಕೂ ಸಲ್ಲುವ ಗೀತಾ ಸಂದೇಶವನ್ನು ಈ ಲೇಖನದಲ್ಲಿ ಪ್ರತಿಧ್ವನಿಸಿರುವ ಸ್ವಾಮಿ ಹರ್ಷಾನಂದಜಿಯವರು ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರೂ ಹಲವಾರು ಗ್ರಂಥಗಳ ಕರ್ತೃವೂ ಆಗಿದ್ದಾರೆ.

## ಗೀತೆ—ಮಹಾಚಾರ್ಯನ ಮಹತ್ತರವಾದ ಸಂದೇಶ

**ಒಂದು ಮಹೋಪದೇಶ** ಅಥವಾ ಮಹತ್ತಾದ ಒಂದು ಉದಾತ್ತ ಭಾವನೆಯ ಹಿಂದೆ ಮಹಾ ಶಕ್ತಿಯುತವಾದ ಚೈತನ್ಯವೊಂದು ಕ್ರಿಯಾಶೀಲವಾಗಿರುತ್ತದೆ. ಭಗವದ್ಗೀತೆಯಲ್ಲಿ ಪ್ರತಿಪಾದಿತವಾಗಿರುವ ಜೀವನತತ್ತ್ವದ ಸಾಕಾರಮೂರ್ತಿಯಂತಿದ್ದ ಮಹಾಪುರುಷ ಶ್ರೀಕೃಷ್ಣ. ಅದ್ಭುತ ತತ್ತ್ವವೇತ್ತನಾಗಿದ್ದಂತೆ ಮಹಾಕರ್ಮಯೋಗಿಯೂ, ಸಂಪೂರ್ಣ ಅನಾಸಕ್ತನೂ ಆಗಿದ್ದ ಮಹಾಪುರುಷ ಆತ. ಆದ್ದರಿಂದ ಗೀತೆಯ ಸಂದೇಶವನ್ನು ಅರ್ಥೈಸುವ ಮುನ್ನ ಶ್ರೀಕೃಷ್ಣನ ವ್ಯಕ್ತಿತ್ವದ ಸ್ವರೂಪವನ್ನು ಅರಿಯುವುದು ಸೂಕ್ತವಷ್ಟೇ ಅಲ್ಲ, ಸ್ಫೂರ್ತಿದಾಯಕವೂ ಕೂಡ.

## ಗೀತಾಚಾರ್ಯ

ಕೃಷ್ಣವಾಸುದೇವನು ಮಾನವನೋ ಈಶ್ವರನ ಅವತಾರವೋ ಏನೇ ಆಗಿರಲಿ, ಮೂರು ಸಾವಿರ ವರ್ಷಗಳಿಗಿಂತಲೂ ಮಿಗಿಲಾಗಿ ಲಕ್ಷಲಕ್ಷ ಹಿಂದುಗಳ ಹೃದಯಗಳ ಸಾಮ್ರಾಟನಾಗಿರುವನೆಂಬುದು ನಿರ್ವಿವಾದ. ಹಿಂದೂ ಸಮುದಾಯದ ಜೀವನಧರ್ಮ ಹಾಗೂ ಸಂಸ್ಕೃತಿಯ ಮೇಲೆ ಶತಶತಮಾನಗಳಿಂದ ಒಬ್ಬ ವ್ಯಕ್ತಿ ಇಂಥ ಗಾಢವಾದ ಪ್ರಭಾವವನ್ನು ಬೀರಿರಬೇಕಾದರೆ ಅವನು ಸಾಕ್ಷಾತ್ ಈಶ್ವರನಿಗಿಂತ ಕಡಮೆಯೇನೂ ಅಲ್ಲ. ಮಾನವಕುಲವನ್ನುದ್ಧರಿಸಲು ಈಶ್ವರನ ಅವತಾರವೇ ಅವನು ಎಂದು ಹಿಂದುಗಳು ನಂಬಿದ್ದಾರೆ.

ಅವತಾರ ಅಥವಾ ಈಶನ ಮಾನವ ಸ್ವರೂಪ ಎಂಬುದು ಮಾನವಕುಲದ ಇತಿಹಾಸದ ಪರಿಣಾಮವಲ್ಲ; ಇತಿಹಾಸವನ್ನು ಸೃಷ್ಟಿಸುವ, ಮನುಕುಲದ ಉದ್ಧಾರದ ಅಭ್ಯುದಯದ ಶ್ರೇಯಸ್ಸಿನ ಹಾದಿಯಲ್ಲಿ ತೊಡಗಿಸುವ, ಮಹಾದ್ಭುತ ದೈವೀ ಶಕ್ತಿ ಅದು. ಗೀತೆಯಲ್ಲಿ ಕೃಷ್ಣನೇ ಉಪದೇಶಿಸುವಂತೆ (ಭಗವದ್ಗೀತಾ, ೪.೭-೮) ಧರ್ಮದ ಪುನರುತ್ಥಾನವೇ ಅವತಾರದ ಉದ್ದೇಶ.

> ನೀವು ಭಗವದ್ಗೀತೆಯನ್ನು ಅಧ್ಯಯನ ಮಾಡದೆ ಕೃಷ್ಣನನ್ನು ಅರ್ಥಮಾಡಿಕೊಳ್ಳಲಾರಿರಿ. ಏಕೆಂದರೆ ಅವನು ತನ್ನ ಬೋಧನೆಯ ಮೂರ್ತರೂಪವಾಗಿದ್ದನು.
> *— ಸ್ವಾಮಿ ವಿವೇಕಾನಂದ.*

ತನ್ನ ಜೀವನದುದ್ದಕ್ಕೂ ಕೃಷ್ಣನಿಗಿದ್ದ ಮುಖ್ಯವಾದ ಆಸಕ್ತಿಯೆಂದರೆ ಧರ್ಮ, ಅದರ ಉದ್ಧಾರ, ರಕ್ಷಣೆ, ಅದರ ಆದ್ಯತೆಯ ಪುನರುತ್ಥಾನ; ಮತ್ತು ಧರ್ಮ-ಅಧರ್ಮಗಳ ವಿವೇಚನೆ ಕ್ಲಿಷ್ಟವಾಗಿ ಕಂಡುಬಂದ ಸಂದರ್ಭಗಳಲ್ಲಿ ಧರ್ಮದ ನಿಗೂಢತೆಯನ್ನು (ಧರ್ಮಸೂಕ್ಷ್ಮವನ್ನು) ಬಿಡಿಸಿ ಹೇಳುವುದು.

ಧರ್ಮವು ಮಾನವರ ಎಲ್ಲ ಮನೋವೃತ್ತಿಗಳಲ್ಲಿ ಹಾಗೂ ಅವರ ಎಲ್ಲ ವ್ಯವಹಾರಗಳಲ್ಲಿ ಅಭಿವ್ಯಕ್ತವಾಗದಿದ್ದರೆ ಅದು ಕೇವಲ ಅರ್ಥವಿಲ್ಲದ ಮಾತಾಗುತ್ತದೆ. ಆದ್ದರಿಂದಲೇ ಕೃಷ್ಣನಿಗೆ ಮಾನವಕುಲದ ಬಗ್ಗೆ, ಅದರಲ್ಲೂ ದುರ್ಬಲರ ದೀನದಲಿತರ ಬಗ್ಗೆ ಅಷ್ಟೊಂದು ಕಾಳಜಿ ಇದ್ದದ್ದು.

ಅನುಭಾವ ಮತ್ತು ಕ್ರಿಯಾಶೀಲತೆ ಜತೆಗೂಡಿರುವುದು ಅಪರೂಪ. ಆದರೆ ಕೃಷ್ಣನಲ್ಲಿ ಅವು ಜತೆಗೂಡಿದ್ದುವು. ಲೋಕಹಿತ ಸಾಧನೆಗಾಗಿ ಕೃಷ್ಣ ಸದಾ ಬಿಡುವಿಲ್ಲದ ಕಾರ್ಯಪ್ರವೃತ್ತ. ಶೈಶವದಿಂದ ದೇಹಾಂತ್ಯದವರೆಗೆ ಕೃಷ್ಣನದು ಸತತವಾಗಿ ಅತ್ಯಂತ ಕ್ರಿಯಾಶೀಲವಾದ ಬದುಕು; ಆದರದು ಸ್ವಾರ್ಥಕ್ಕಾಗಿ ಅಲ್ಲ, ಪರಾರ್ಥಕ್ಕಾಗಿ, ಲೋಕಸಂಗ್ರಹಕ್ಕಾಗಿ. ಅವನ ವ್ಯಕ್ತಿತ್ವ ಪರಾರ್ಥದ ಪ್ರತೀಕ. ಲೋಕಹಿತಕ್ಕಾಗಿಯೇ ವಿನಿಯೋಗವಾದ ಬದುಕು ಅವನದು.

ಎಲ್ಲಕ್ಕಿಂತ ಮಿಗಿಲಾಗಿ ಕೃಷ್ಣನು ಮಾನವೀಯತೆಯ ಪರಾಕಾಷ್ಠೆಯ ಮೂರ್ತಿ. ಮಾನವರ ಎಲ್ಲ ರೀತಿಯ ಭಾವನೆಗಳಿಗೂ ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದವನು. ಅವನೊಡನೆ ವ್ಯವಹರಿಸುತ್ತಿದ್ದವರೆಲ್ಲರಿಗೂ ಇವನು ನಮ್ಮ ಆತ್ಮೀಯ, ಹಿತೈಷಿ ಎಂಬ ಅನುಭವವಾಗುತ್ತಿತ್ತು. ಅವನೊಡನೆ ವ್ಯವಹರಿಸಲು ಎಲ್ಲರೂ ಹೆಮ್ಮೆಪಡುತ್ತಿದ್ದರು. ಅವನ ತಾಯಿ-ತಂದೆ ದೇವಕೀ-ವಸುದೇವರು, ಅವನನ್ನು ಸಾಕಿದ ತಾಯಿ-ತಂದೆ ಯಶೋದಾ-ನಂದರು, ಗೋಕುಲ-ವೃಂದಾವನಗಳಲ್ಲಿ ಸಹಚರರಾಗಿದ್ದವರು, ಗೋಪಿಯರು, ರುಕ್ಮಿಣೀ-ಸತ್ಯಭಾಮಾ ಮುಂತಾದ ಅವನ ಪತ್ನಿಯರು, ಯಾದವ ಪ್ರಮುಖರು, ಪಾಂಡವರು ಹಸ್ತಿನಾಪುರದ ಹಿರಿಯರು, ಹಸುಗಳು, ಕುದುರೆಗಳು ಕೋತಿಗಳೂ ಹೀಗೆ ಅವನ ವಲಯದಲ್ಲಿ ಬಂದವರಾರೂ ಅವನ ಹೃದಯಸ್ಪರ್ಶಿ ವಾತ್ಸಲ್ಯದ ಪ್ರಭಾವಕ್ಕೆ ಒಳಗಾಗದೆ ಇರುತ್ತಿರಲಿಲ್ಲ. ಎಲ್ಲರ ಮನಸೆಳೆಯುವ ಅವನ ಅಪೂರ್ವ ಚೆಲುವು, ಮಂತ್ರಮುಗ್ಧರನ್ನಾಗಿಸುವ ಅವನ ಮುರಳೀಗಾನ, ಜೇನಿನಂಥ ಅವನ ನುಡಿ ಮಾಧುರ್ಯ, ತರ್ಕಸಿಂಧುವಾದ ಅವನ ವಾಕ್ ಸರಣಿ—ಇವು ದೇವತೆಗಳನ್ನೇ ವಿವಶರನ್ನಾಗಿಸುತ್ತಿದ್ದಾಗ ಇನ್ನು ಮಾನವರ ಬಗ್ಗೆ



ಹೇಳುವುದೇನಿದೆ? ಆದ್ದರಿಂದಲೇ ಅವನು "ಪುರುಷೋತ್ತಮ," ಮಾನವಶ್ರೇಷ್ಠ ಎನಿಸಿಕೊಂಡದ್ದು.

## ಗೀತೆಯಲ್ಲಿ ಏನಿದೆ ?

"ಶ್ರೀಮದ್ ಭಗವದ್ಗೀತಾ" ಇದು ಗೀತೆಯ ಪೂರ್ಣ ಹೆಸರು. ಗೀತೆಯಿಲ್ಲದೆ ಹಿಂದೂಧರ್ಮವಿಲ್ಲ ಎನ್ನುವಷ್ಟರ ಮಟ್ಟಿಗೆ ಗೀತೆಯು ನಮ್ಮ ಧರ್ಮದಲ್ಲಿ ಹಾಸುಹೊಕ್ಕಾಗಿದೆ. ಆದರೂ ಗೀತೆಯಲ್ಲಿ ಏನಿದೆ? ಈ ಪ್ರಶ್ನೆಗೆ ಉತ್ತರ ಬಹುಮಂದಿಗೆ ತಿಳಿದಿಲ್ಲ.

ಗೀತೆಯು ಐದನೆಯ ವೇದವೆಂದು ಪ್ರಸಿದ್ಧವಾಗಿರುವ ಮಹಾಭಾರತದಲ್ಲಿ (ಭೀಷ್ಮಪರ್ವ, ಅಧ್ಯಾಯ ೨೫-೪೨) ಬರುತ್ತದೆ. ಶ್ರೀಕೃಷ್ಣ ಅರ್ಜುನ ಇವರ ಸಂವಾದದ ರೂಪದಲ್ಲಿದೆ. ಒಟ್ಟು ಶ್ಲೋಕಗಳ ಸಂಖ್ಯೆ ೭೦೦.

ಗೀತೆಯು ಅಷ್ಟು ಪ್ರಸಿದ್ಧವಾಗಲು ಕಾರಣವೇನು? ಅದನ್ನು ಉಪದೇಶಿಸಿದ ಮಹಾಪುರುಷ, ಪರಮಾತ್ಮನ ಅವತಾರವೆಂದು ಪ್ರಸಿದ್ಧನಾದ ಶ್ರೀಕೃಷ್ಣ. ಅದನ್ನು ಪಡೆದವನು ಮಹಾವೀರನೂ ಮಹಾಭಕ್ತನೂ ಆಗಿದ್ದ ಅರ್ಜುನ. ಅದನ್ನು ಉಪದೇಶಿಸಿದ ಸಂದರ್ಭ ಕುರುಕ್ಷೇತ್ರ ಯುದ್ಧ, ಸ್ಥಳ ಯುದ್ಧಭೂಮಿ. ಕೇಳಿದ ಪ್ರಶ್ನೆಗಳು ಜೀವನದ ಕರ್ತವ್ಯನಿರ್ವಹಣೆಗೆ ನೇರವಾಗಿ ಸಂಬಂಧಿಸಿದವು. ಕೊಟ್ಟ ಉತ್ತರ ಅಂದಿಗೂ ಇಂದಿಗೂ ಮುಂದೆಯೂ ಶಾಶ್ವತವಾಗಿ ಅನ್ವಯಿಸತಕ್ಕಂಥವು. ಆದ್ದರಿಂದಲೇ ಗೀತೆಯನ್ನು ಉಪನಿಷತ್ತು, ಬ್ರಹ್ಮವಿದ್ಯೆ ಮತ್ತು ಯೋಗಶಾಸ್ತ್ರ ಎಂದು ಕರೆದಿರುವುದು. ಆಧ್ಯಾತ್ಮಿಕ ರಹಸ್ಯಗಳನ್ನೊಳಗೊಂಡಿರುವುದರಿಂದ ಉಪನಿಷತ್ತು; ಪರಬ್ರಹ್ಮವನ್ನು ಕುರಿತು ಹೇಳುವುದರಿಂದ ಬ್ರಹ್ಮವಿದ್ಯೆ; ಸಾಧನಾಪ್ರಧಾನವಾದುದರಿಂದ ಯೋಗಶಾಸ್ತ್ರ. ಪ್ರಪಂಚದ ಮುಖ್ಯಭಾಷೆಗಳಿಗೆಲ್ಲ ಅದನ್ನು ಅನುವಾದ ಮಾಡಿರುವುದಕ್ಕೂ ಇವೇ ಮುಖ್ಯ ಕಾರಣಗಳು.

ಗೀತೆಯು ಪ್ರಾರಂಭವಾಗುವುದು ಕುರುಕ್ಷೇತ್ರದ ಯುದ್ಧಭೂಮಿಯಲ್ಲಿ, ನಾಟಕೀಯವಾದ ಸನ್ನಿವೇಶದಲ್ಲಿ. ಯುದ್ಧಕ್ಕೆ ಮುನ್ನ,

**ಈ ಅದ್ಭುತ ಕಾವ್ಯದ ( ಗೀತೆ) ಅನೇಕ ಹೇಳಿಕೆಗಳು ಅತ್ಯುತ್ಕೃಷ್ಟವಾದುವುಗಳು, ಅದು ನೀಡುವ ಸ್ಫೂರ್ತಿ ಅತ್ಯುದಾತ್ತವಾದುದು, ಅದರಲ್ಲಿ ಉಕ್ತವಾಗಿರುವ ಧರ್ಮ ಅತ್ಯಂತ ಪರಿಶುದ್ಧ ಮತ್ತು ಮೃದು.**

—ಎಡ್ವಿನ್ ಆರ್ನಾಲ್ಡ್. (Edwin Arnold).

ಯುದ್ಧಕ್ಕಾಗಿ, ಅತ್ಯಂತ ಹುರುಪು ಆವೇಶಗಳಿಂದ ಬಂದಿದ್ದ ಅರ್ಜುನನಿಗೆ ಕೌರವ ಸೇನೆಯ ಭೀಷ್ಮದ್ರೋಣರನ್ನೂ ಇತರರನ್ನೂ ಕಂಡಾಗ ಮನಸ್ಸು ಕದಡಿಹೋಗುತ್ತದೆ. ಅಲ್ಪ ಫಲವಾದ ರಾಜ್ಯಾಧಿಪತ್ಯಕ್ಕಾಗಿ ಗುರುಹಿರಿಯರನ್ನು ಕೊಲ್ಲುವಂಥ ಮಹಾಪಾತಕವನ್ನೆಸಗಲು ಅವನ ಮನಸ್ಸು ಒಪ್ಪುವುದಿಲ್ಲ. ಯುದ್ಧಭೂಮಿಯಿಂದ ಹಿಂತಿರುಗಿ ಭಿಕ್ಷೆಯಿಂದಾದರೂ ಜೀವಿಸುವುದು ಲೇಸೆಂದು ವಿಷಾದದಿಂದ ನಿಶ್ಚಯಿಸುತ್ತಾನೆ. "ಇದು ಕ್ಷಣಿಕವಾದ ಹೃದಯದೌರ್ಬಲ್ಯ, ಆರ್ಯರಿಗೆ ಯೋಗ್ಯವಲ್ಲದ, ಷಂಡರಿಗೆ ಮಾತ್ರ ತಕ್ಕುದಾದ ನಡತೆ, ಆದ್ದರಿಂದ ಎದ್ದೇಳು!" ಎಂಬ ಶ್ರೀಕೃಷ್ಣನ ಧೀರ ಗಂಭೀರ ಘೋಷಣೆಯಿಂದಲೂ ಅವನು ಎಚ್ಚೆತ್ತುಕೊಳ್ಳದ್ದರಿಂದ ಅವನಿಗಾಗಿ, ಅವನ ಮೋಹನಾಶಕ್ಕಾಗಿ ಶ್ರೀಕೃಷ್ಣನು ತತ್ತ್ವಶಾಸ್ತ್ರವನ್ನೇ ಉಪದೇಶಿಸಬೇಕಾಯಿತು.

ಅರ್ಜುನನ ವಾದದ ತಿರುಳು ಇಷ್ಟು: ಕೊಲ್ಲುವುದು ಮಹಾಪಾಪ. ಅದರಲ್ಲೂ ರಾಜ್ಯಸುಖವೆಂಬ ಸ್ವಾರ್ಥಕ್ಕಾಗಿ ಗುರುಹಿರಿಯರನ್ನು ಅಣ್ಣತಮ್ಮಂದಿರನ್ನು ಬಂಧುಬಳಗವನ್ನು ಕೊಲ್ಲುವುದು ಅತ್ಯಂತ ಹೇಯಕೃತ್ಯ. ಆದ್ದರಿಂದ ಇಂಥ ಕೃತ್ಯಕ್ಕೆಳಸದೆ, ಜೀವನೋಪಾಯಕ್ಕಾಗಿ ಭಿಕ್ಷೆಯನ್ನು ಕೈಗೊಂಡರೂ ಉತ್ತಮವೇ.

ಇದಕ್ಕೆ ಶ್ರೀಕೃಷ್ಣನ ಉತ್ತರ ನೇರ ಮತ್ತು ಸ್ಪಷ್ಟ. ಇಲ್ಲಿ ಮೂಲ ಪ್ರಶ್ನೆ ಕೊಲ್ಲಬೇಕೇ ಅಲ್ಲವೇ ಎಂಬುದಲ್ಲ. ದುರಾಶೆಯಿಂದ ಪೀಡಿತರಾದ, ತಮ್ಮ ಸ್ವಾರ್ಥಕ್ಕಾಗಿ ಯಾರನ್ನು ಬೇಕಾದರೂ ಏನನ್ನಾದರೂ ಹೇಗಾದರೂ ಬಲಿಕೊಡಬೇಕೆಂಬ ನಂಬುಗೆಯುಳ್ಳ ಜನರನ್ನು ಲೋಕಹಿತಕ್ಕಾಗಿ ಶಿಕ್ಷಿಸಬೇಕೇ ಬೇಡವೇ ಎಂಬುದು ಮೂಲಪ್ರಶ್ನೆ. ಸಾಮ ದಾನ ಭೇದೋಪಾಯಗಳೆಲ್ಲವನ್ನೂ ಪ್ರಯೋಗಿಸಿ ಅವು ವಿಫಲವಾದಾಗ, ದಂಡೋಪಾಯವೇ ಏಕೈಕ ಮಾರ್ಗವಾಗಿರುವಾಗ ಅದನ್ನು ಪ್ರಯೋಗಿಸಿ ಅಧರ್ಮಿಗಳನ್ನೂ ಅಧರ್ಮವನ್ನೂ ನಾಶಗೊಳಿಸಿ ಧರ್ಮವನ್ನು ಪ್ರತಿಷ್ಠಾಪನೆ ಮಾಡತಕ್ಕದ್ದು ಕ್ಷತ್ರಿಯನ, ಅದರಲ್ಲೂ ರಾಜವಂಶದ ಕ್ಷತ್ರಿಯನ ಪವಿತ್ರ ಕರ್ತವ್ಯ. ಈ ಪ್ರಯತ್ನದಲ್ಲಿ ಯಶಸ್ವಿಯಾಗಬೇಕು ಅಥವಾ ಅದರಲ್ಲಿಯೇ ಪ್ರಾಣಾರ್ಪಣೆ ಮಾಡಬೇಕು. ಇವೆರಡರ ಹೊರತು ಬೇರಾವ ದಾರಿಯೂ ಅವನಿಗಿಲ್ಲ. ಸಮಾಜವು ಅವನ ಹೆಗಲ ಮೇಲೆ ಹೊರಿಸಿರುವ ಈ ಗುರುತರ ಜವಾಬ್ದಾರಿಯಿಂದ ಅವನು ಹಿಂತಿರುಗುವ ಪ್ರಶ್ನೆಯೇ ಇಲ್ಲ. ಹಾಗೆ ಮಾಡಿದ್ದೇ ಆದರೆ ಅಪಕೀರ್ತಿ ಕಟ್ಟಿಟ್ಟದ್ದು. ಸಂಭಾವಿತನಿಗೆ ಅಪಕೀರ್ತಿ ಮರಣಕ್ಕಿಂತಲೂ ಘೋರವಾದುದು.

ಇನ್ನು ಕೊಲ್ಲುವ ಪ್ರಶ್ನೆ. ಮೂಲಭೂತವಾಗಿ ನಾವೆಲ್ಲ ಆತ್ಮಸ್ವರೂಪಿಗಳು. ಆತ್ಮನಿಗೆ ಹುಟ್ಟು, ಬೆಳವಣಿಗೆ, ರೋಗ, ಮುಪ್ಪು,

ಸಾವು—ಇವಾವುವೂ ಇಲ್ಲ. ಈ ಅವಸ್ಥಾಭೇದಗಳೆಲ್ಲ ಇರುವುದು ದೇಹಕ್ಕೇ ಹೊರತು ಅದರಲ್ಲಿ ತಾತ್ಕಾಲಿಕವಾಗಿ ವಾಸಿಸುತ್ತಿರುವ ಆತ್ಮನಿಗಲ್ಲ. ಜ್ಞಾನಿಯು ಈ ಗುಟ್ಟನ್ನರಿತು ತನ್ನ ಕರ್ತವ್ಯವನ್ನು ಅವಿಚಲಿತ ಮನಸ್ಕನಾಗಿ ನೆರವೇರಿಸಬೇಕು. ಒಂದು ವೇಳೆ ದೇಹವೊಂದಿಗೇ ಜನನ, ಅದರ ಮರಣದೊಂದಿಗೇ ಮರಣ ಎಂದೊಪ್ಪಿದರೂ ಇದು ಅನಿವಾರ್ಯವಾದುದರಿಂದ ಇದಕ್ಕಾಗಿ ಶೋಕಿಸಿ ಪ್ರಯೋಜನವಿಲ್ಲ.

ಈ ಲೋಕದಲ್ಲಿ ಹುಟ್ಟಿದ ಮೇಲೆ ಎಲ್ಲರೂ ಒಂದಲ್ಲ ಒಂದು ರೀತಿಯ ಕರ್ಮವನ್ನು ಮಾಡಲೇಬೇಕು. ತಮ್ಮ ತಮ್ಮ ಪಾಲಿಗೆ ಬಂದ ಕರ್ತವ್ಯವನ್ನು, ಅದೆಷ್ಟೇ ಅಪ್ರಿಯವಾಗಿರಲಿ, ನೆರವೇರಿಸಬೇಕು. ಇದನ್ನು ಶ್ರೀಕೃಷ್ಣನು "ಸ್ವಧರ್ಮ"ವೆಂದು ಕರೆದಿರುತ್ತಾನೆ. ಕರ್ಮದಿಂದ ಸುಖದುಃಖಗಳ ಅನುಭವ ಬರುವುದಕ್ಕೆ ಮುಖ್ಯ ಕಾರಣ ನಮಗೆ ಅದರ ಮೇಲಿರುವ ಮೋಹ. ಇಷ್ಟಫಲ ಬಂದರೆ ಸುಖ ಸಂತೋಷ. ಅನಿಷ್ಟಫಲ ಬಂದರೆ ದುಃಖ ಅತೃಪ್ತಿ ನಿರಾಶೆ. ಫಲದ ಮೇಲಿನ ಆಶೆಯನ್ನು, ಫಲಕ್ಕಾಗಿಯೇ ಕರ್ಮವೆಸಗುವ ಪ್ರವೃತ್ತಿಯನ್ನು ತೊರೆದು, ಕೇವಲ ಕರ್ತವ್ಯಬುದ್ಧಿಯಿಂದ, ಲೋಕೋಪಕಾರ ದೃಷ್ಟಿಯಿಂದ, ಪರಮೇಶ್ವರನಿಗೆ ಪ್ರೀತಿಯಾಗಲೆಂಬ ಭಾವನೆಯಿಂದ ಕರ್ಮವನ್ನು ಮಾಡಿದರೆ ದೊರೆಯಬೇಕಾದ ಫಲವು ಸಿಗುವುದಲ್ಲದೆ ಅದಕ್ಕಿಂತ ಅಧಿಕವಾಗಿ ಮನಸ್ಸಿಗೆ ಶಾಂತಿ ದೊರಕುತ್ತದೆ. ಈ ನಿಷ್ಕಾಮ ಕರ್ಮದ ಅರ್ಥಾತ್ ಕರ್ಮಯೋಗದ ಭಾವನೆಯು ಶ್ರೀಕೃಷ್ಣನ ವಿಶೇಷ ಕೊಡುಗೆಯೆನ್ನಬಹುದು.

ಈ ಸಂದರ್ಭದಲ್ಲಿ ಶ್ರೀಕೃಷ್ಣನು ಮತ್ತೂ ಒಂದು ಕೊಡುಗೆಯನ್ನಿತ್ತಿದ್ದಾನೆ. ಅದೇ ಯಜ್ಞ ಕಲ್ಪನೆಯ ವಿಸ್ತರಣ. ಆಗಿನ ಕಾಲದಲ್ಲಿ ಯಜ್ಞಯಾಗಾದಿಗಳು ಧರ್ಮದ ಪ್ರಧಾನ ಅಂಗಗಳಾಗಿದ್ದವು. ಶ್ರೀಕೃಷ್ಣನು ಯಜ್ಞಕಲ್ಪನೆಯನ್ನು ಒಪ್ಪಿಕೊಂಡು ಮೂಲಾರ್ಥವನ್ನು ವಿಸ್ತರಿಸಿರುತ್ತಾನೆ. ಇದರ ಪ್ರಕಾರ ಯಜ್ಞವೆಂದರೆ ಕೇವಲ ಅಗ್ನಿಯಲ್ಲಿ ಅರ್ಪಿಸುವ ಆಹುತಿಯಲ್ಲ. ವ್ಯಷ್ಟಿಯು ಸಮಷ್ಟಿಗಾಗಿ, ವ್ಯಕ್ತಿಯು ಸಮಾಜಕ್ಕಾಗಿ, ಪ್ರಕೃತಿಗಾಗಿ, ಅರ್ಪಿಸುವ ಋಣವೇ ಯಜ್ಞ. ಹಣವಿರುವವನು ಅದನ್ನು ಬಡ ಬಗ್ಗರಿಗೆ ದಾನಮಾಡಿದರೆ ಅದು "ದ್ರವ್ಯ ಯಜ್ಞ". ಜ್ಞಾನವಿರುವವನು ಅದನ್ನು ಅಜ್ಞಾನಿಗಳಿಗೆ ಹಂಚಿದರೆ ಅದು "ಜ್ಞಾನ ಯಜ್ಞ" ತಪಸ್ಸಿನಿಂದ ಸಿದ್ಧಿ ಪಡೆದವನು ಆ ತಪಶ್ಶಕ್ತಿಯನ್ನು ಇತರರ ಉಪಕಾರಕ್ಕಾಗಿ ವಿನಿಯೋಗಿಸಿದರೆ ಅದು "ತಪೋಯಜ್ಞ".

ಲೋಕಸಂಗ್ರಹಕ್ಕಾಗಿ, ಲೋಕೋಪಕಾರಕ್ಕಾಗಿ, ಯಜ್ಞ ದೃಷ್ಟಿಯಿಂದ ತನ್ನ ಕರ್ತವ್ಯಗಳನ್ನು ನೆರವೇರಿಸುವ ನೇತಾರನು—ಇವನನ್ನು ಗೀತೆಯಲ್ಲಿ "ಶ್ರೇಷ್ಠ"ನೆಂದು ಕರೆಯಲಾಗಿದೆ—ತನಗಿಂತ ಆಧ್ಯಾತ್ಮಿಕ ವಿಕಾಸದ ಹಾದಿಯಲ್ಲಿ ಹಿಂದಿರುವವರನ್ನು ಅವರವರ ಶ್ರದ್ಧೆಗೆ ಘಾಸಿ ಮಾಡದೆ ಮೇಲೆತ್ತಬೇಕು. ಆದ್ದರಿಂದ ಆತನು ತುಂಬ ಎಚ್ಚರಿಕೆಯಿಂದ, ಮೈಯೆಲ್ಲಾ ಕಣ್ಣಾಗಿ, ನಡೆದುಕೊಳ್ಳಬೇಕು.

ಕರ್ತವ್ಯಕರ್ಮಗಳನ್ನು ಕುರಿತು ವಿಸ್ತಾರವಾಗಿ ಚರ್ಚಿಸಿದ್ದರೂ ಗೀತೆಯು ಪ್ರಧಾನವಾಗಿ ಅಧ್ಯಾತ್ಮಶಾಸ್ತ್ರ, ಮೋಕ್ಷಶಾಸ್ತ್ರ. ಆದುದರಿಂದಲೇ ಮೋಕ್ಷಮಾರ್ಗದ ಬಗೆಗೂ ಇಲ್ಲಿ ಸಾಕಷ್ಟು ವಿವೇಚನೆಯನ್ನು ಮಾಡಲಾಗಿದೆ. ಈ ದಿಕ್ಕಿನಲ್ಲಿಯೂ ಶ್ರೀಕೃಷ್ಣನು ಮೂಲಭೂತವಾದ ಕಾಣಿಕೆಯನ್ನಿತ್ತಿರುತ್ತಾನೆ. ಉಪನಿಷತ್ತುಗಳ ಕಾಲದಲ್ಲಿ ಆತ್ಮಜ್ಞಾನವನ್ನು ಪಡೆಯಲು ವೈರಾಗ್ಯ ಪೂರ್ವಕವಾದ ಸರ್ವಕರ್ಮಸಂನ್ಯಾಸ ಮತ್ತು ಜ್ಞಾನಯೋಗ ಇವನ್ನೇ ಪ್ರಧಾನವಾಗಿ ಉಪದೇಶಿಸಲಾಗಿತ್ತು; ಮತ್ತು ಕರ್ಮಗಳನ್ನು ನಿಂದಿಸಲಾಗಿತ್ತು. ಭಕ್ತಿ, ಯೋಗ-ಧ್ಯಾನಯೋಗಗಳು ಎಲ್ಲಿಯೋ ಒಮ್ಮೆ ಮಿಂಚಿ ಮಾಯವಾಗುತ್ತವೆ. ಆದರೆ ಗೀತೆಯಲ್ಲಿ ಶ್ರೀಕೃಷ್ಣನು ಎಲ್ಲ ಯೋಗಗಳನ್ನೂ ವಿಸ್ತಾರವಾಗಿಯೇ ಉಪದೇಶಿಸಿರುವುದಲ್ಲದೆ ಅವನ್ನು ಒಂದೇ ಯೋಗಮಾರ್ಗದ ವಿವಿಧ ಪ್ರಕಾರಗಳಂತೆ ವಿವರಿಸಿ ಸಮನ್ವಯವನ್ನು ಸಾಧಿಸಿರುತ್ತಾನೆ. ಸಾಧಕರು ತಮ್ಮ ಪ್ರವೃತ್ತಿಗೆ, ಇಷ್ಟಕ್ಕೆ ತಕ್ಕಂತೆ ಒಂದು ಯೋಗಮಾರ್ಗವನ್ನು ಪ್ರಧಾನ ಸಾಧನೆಯಾಗಿ ಸ್ವೀಕರಿಸಿ ಇತರ ಯೋಗಗಳನ್ನೂ ಅದರ ಅಂಗಗಳಾಗಿ ಬಳಸಿಕೊಳ್ಳಲು ಅವಕಾಶವಿದೆ.

ಸಾಮಾನ್ಯ ಸಾಧಕನ ದೃಷ್ಟಿಯಿಂದ ಹೇಳುವುದಾದರೆ, ಬಹುಶಃ ಶ್ರೀ ಕೃಷ್ಣನ ಅತ್ಯಂತ ಆಶಾದಾಯಕವಾದ ಸಂದೇಶವೆಂದರೆ ಭಗವದವತಾರದ ಸಾಧ್ಯತೆ ಮತ್ತು ಸತ್ಯತ್ವ. ಅಧರ್ಮವು ಅಭಿವೃದ್ಧಿ ಹೊಂದಿ ಧರ್ಮವು ಅವನತವಾದಾಗ ಪರಮಾತ್ಮನು ಈ ಜಗತ್ತಿನಲ್ಲಿ ಮನುಷ್ಯರೂಪದಿಂದ ಜನಿಸುತ್ತಾನೆ. ದುಷ್ಟಶಿಕ್ಷಣ ಶಿಷ್ಟ ರಕ್ಷಣೆಗಳನ್ನು ಮಾಡುವುದಲ್ಲದೆ ಧರ್ಮದ ಸ್ವರೂಪವನ್ನು ಉಜ್ಜ್ವಲವಾಗಿ ಪ್ರಕಟಿಸಿ ಅದನ್ನು ಮತ್ತೆ ಪ್ರತಿಷ್ಠಾಪನೆ ಮಾಡುತ್ತಾನೆ. ಇದನ್ನೇ ಅವತರಣವೆಂದೂ ಹಾಗೆ ಪ್ರಕಟಿತವಾದ ಪರಮಾತ್ಮನನ್ನು ಅವತಾರವೆಂದೂ ಕರೆದಿರುತ್ತದೆ. ಈ ಅವತಾರಗಳಿಗಾದರೋ ದೇಶ-ಕಾಲಗಳ ಅಥವಾ ಸಂಖ್ಯೆಯ ನಿಗದಿಯಾಗಲಿ ಸೀಮೆಯಾಗಲಿ ಇರುವುದಿಲ್ಲ. ಯಾವ ದೇಶದಲ್ಲಿಯೇ ಆಗಲಿ ಯಾವ ಕಾಲದಲ್ಲಿಯೇ ಆಗಲಿ ಎಷ್ಟು ಸಲ ಬೇಕಾದರೂ ಆಗಲಿ—ಎಲ್ಲಿಯವರೆಗೆ ಅದರಿಂದ ಧರ್ಮರಕ್ಷಣೆಯಾಗುವುದೋ ಅಲ್ಲಿಯವರಗೆ —ಪರಮಾತ್ಮನು ಅವತಾರಗೈಯಲು ಸಿದ್ಧ. ಇಂಥ ಅವತಾರಪುರುಷನಲ್ಲಿ ಸಂಪೂರ್ಣ ಶರಣಾಗತಿಯನ್ನು ಮಾಡುವುದರಿಂದ ಸುಖವನ್ನೂ ಪಡೆಯಬಹುದು.

ಇದು ಗೀತೆಯ ಸಾರ. ಪ್ರಾಸಂಗಿಕವಾಗಿ ಮತ್ತು ಅರ್ಜುನನು ಮಧ್ಯೆ ಮಧ್ಯೆ ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ ಇನ್ನೂ ಅನೇಕ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ಆದರೆ ಗೀತೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಗೀತಾಸಂದೇಶವನ್ನು ಆಚರಣೆಗೆ ತರಲು ಅವು ಅಷ್ಟೇನೂ ಆವಶ್ಯಕವಲ್ಲ.

ಭಗವದ್ಗೀತೆಯು ಭಾರತದ ಮಹೋನ್ನತ ಶಾಸ್ತ್ರಗಳಲ್ಲಿ ಒಂದು ಮತ್ತು ಜಗತ್ತಿನ ಅತ್ಯಂತ ಗಹನ ಶಾಸ್ತ್ರಗಳಲ್ಲಿ ಒಂದು. ಅದು ಸೌಂದರ್ಯದಿಂದ ಶ್ರೀಮಂತವಾಗಿದೆ ಮತ್ತು ಕಾವ್ಯಶಕ್ತಿಯಿಂದ ತುಂಬಿದೆ.

—ಜಾನ್‌ಸ್ಟನ್. (*Johnstan*)